
# ಕಿತ್ತೂರಿನ ವಿಶೇಷ ಖಾದ್ಯ ಸಂಗೀತ



■ ಚಂದ್ರಶೇಖರ ಎಸ್. ಚಿನಕೇಕರ

ಸಂಗೀತ ಅಂದ್ರೆ ಯಾರಿಗೆ ಇಷ್ಟವಿಲ್ಲ ಹೇಳಿ? ಸಂಗೀತ ಕೇಳುವುದೆಂದರೆ ಕಿವಿ ನಿಮಿರುತ್ತದೆ. ಆದ್ರೆ ಈ ಊರಲ್ಲಿ ಸಂಗೀತ ಎಂದರೆ ಬಾಯಲ್ಲಿ ನೀರು ಬರುತ್ತೆ. ಅರೇ ಇದೇನಿದು? ರಾಗ, ತಾಳ, ನಾದ, ಸ್ವರಗಳ ಸಂಗೀತದಿಂದ ಅದು ಹೇಗೆ ಬಾಯಲ್ಲಿ ನೀರು ಬರುತ್ತೆ ಅಂದ್ರಾ? ನಾವೀಗ ಹೇಳಹೊರಟಿರುವುದು ಕೇಳುವ ಸಂಗೀತವಲ್ಲ, ತಿನ್ನುವ ಸಂಗೀತ!

ಬೆಳಗಾವಿ ಜಿಲ್ಲೆ ಕಿತ್ತೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಗೆ ಯಾವಾಗಲಾದರೂ ಭೇಟಿ ನೀಡಿದಾಗ ಇಂತಹದೊಂದು 'ಸಂಗೀತ' ಎಂಬ ಹೆಸರಿನ ವಿಶೇಷ ಖಾದ್ಯವನ್ನು ತಾವೂ ಸವಿಯಬಹುದು. ಸಂಗೀತ ವಿಶೇಷ ಕುರುಕಲು ಖಾದ್ಯವು ಪುಣೆ –ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡ ಸಣ್ಣಪುಟ್ಟ ಹೋಟೇಲುಗಳಲ್ಲಿ ಸಿಗುತ್ತದೆ. ಪ್ರತಿದಿನ ಸಂಜೆ ಸಮಯದಲ್ಲಿ 'ಸಂಗೀತ ಖಾದ್ಯ'ವನ್ನು ಸ್ನ್ಯಾಕ್ಸ್ ತರಹ ಪ್ರವಾಸಿಗರು, ಸ್ಥಳೀಯರು, ಪ್ರಯಾಣಿಕರು ಸವಿಯುವುದನ್ನು ಕಾಣಬಹುದು.

ಸಂಗೀತದಲ್ಲಿ ರಾಗ, ತಾಳ, ನಾದ, ಸ್ವರ, ಲಯ ಹೇಗೆಲ್ಲ ಇರುತ್ತದೆಯೋ, ಹಾಗೆಯೇ 'ಸಂಗೀತ ಖಾದ್ಯ'ದಲ್ಲಿ ಕರಿದ ಬಜಿ, ಹುರಿದ ಶೇಂಗಾ, ಚುರುಮುರಿ ಚೂಡಾ, ಒಣ ಅವಲಕ್ಕಿ, ಉಳ್ಳಾಗಡ್ಡಿ ಚೂರು, ಹಸಿಮೆಣಸಿನಕಾಯಿ, ಟೊಮ್ಯಾಟೊ ಹೋಳು, ಸೇವು ಇರುತ್ತವೆ. ಇವುಗಳೆಲ್ಲವನ್ನೂ ಸೇರಿಸಿ ಮಾಡಿದ ಈ ಖಾದ್ಯ ರುಚಿಯೋ ರುಚಿ. ಬಾಯಿ ಚಪ್ಪರಿಸುತ್ತ ತಿಂದರೆ ಅದರ ಮಜಾವೇ ಬೇರೆ. ಗೂಡಂಗಡಿ ಹೋಟೇಲುಗಳಲ್ಲಿಯೇ ಹೆಚ್ಚಾಗಿ ಸಿಗುವ ಸಂಗೀತ ಖಾದ್ಯವನ್ನು ತಯಾರಿ ಮಾಡಲು ವಿಶೇಷವಾದುದೇನು ಮಾಡಬೇಕಿಲ್ಲ.

ಚುರುಮುರಿಗೆ ಮಸಾಲೆ ಬೆರೆಸಿ ಚೂಡಾ ಮಾಡಿಟ್ಟುಕೊಳ್ಳಲಾಗುತ್ತದೆ. ಈರುಳ್ಳಿ, ಮಿರ್ಚಿ ಸೇರಿದಂತೆ ವಿವಿಧ ಬಜಿಯನ್ನು ಕರಿಯಲಾಗುತ್ತದೆ. ಇದಕ್ಕೊಂದಿಷ್ಟು ಒಣ ಅವಲಕ್ಕಿಯನ್ನು ಬೆರೆಸಿ, ಮೇಲೊಂದಿಷ್ಟು ಹುರಿದ ಶೇಂಗಾ ಹಾಕಿ, ಕೊತ್ತಂಬರಿ, ಸಣ್ಣದಾಗಿರುವ ಸೇವು ಉದುರಿಸಲಾಗುತ್ತದೆ. ಇದರೊಂದಿಗೆ ಹಸಿಮೆಣಸಿನಕಾಯಿ, ಟೊಮ್ಯಾಟೊ ಹೋಳಿನೊಂದಿಗೆ ಕರಂಕುರಂ ಅಂತ 'ಸಂಗೀತ' ಸವಿದರೆ ಇನ್ನೊಂದಿಷ್ಟು, ಮತ್ತೊಂದಿಷ್ಟು ತಿನ್ನಬೇಕು ಅಂತ ಅನ್ನಿಸದಿರದು.

30–40 ವರ್ಷಗಳ ಹಿಂದೆ ಚನ್ನಮ್ಮನ ಕಿತ್ತೂರು ಪಟ್ಟಣದಲ್ಲಿ ಮಾತ್ರ ದೊರೆಯುತ್ತಿದ್ದ 'ಸಂಗೀತ ಖಾದ್ಯ' ಇತ್ತೀಚಿನ ದಿನಗಳಲ್ಲಿ ಸುತ್ತಮುತ್ತಲಿನ ಜಿಲ್ಲೆಗಳಲ್ಲೂ ಸಿಗುತ್ತಿದೆ. ಪ್ರತಿದಿನ ಸಂಜೆ ಹೊತ್ತಿನಲ್ಲಿ ಮಾತ್ರ ದೊರೆಯುತ್ತದೆ. ಒಂದು ಪ್ಲೇಟ್ ಸಂಗೀತಕ್ಕೆ 60 ರೂ, 70 ರೂ, 80 ರೂ ಸೇರಿದಂತೆ ಆಯಾ ಹೋಟೇಲುಗಳಿಗೆ ಅನುಗುಣವಾಗಿ ಬೇರೆ ಬೇರೆ ದರಗಳಿವೆ. ಇತ್ತೀಚೆಗೆ ಬೆಳಗಾವಿ, ಧಾರವಾಡ, ಗದಗ ಸೇರಿದಂತೆ ನೆರೆಯ ಜಿಲ್ಲೆಗಳಲ್ಲಿ ಸಂಗೀತ ಖಾದ್ಯದ ಹವಾ ಜೋರಾಗಿದೆ.

ಈ ಖಾದ್ಯಕ್ಕೆ 'ಸಂಗೀತ' ಎಂದು ಹೆಸರು ಬರಲು ಕಾರಣವೊಂದಿದೆ. ಕಿತ್ತೂರು ಪಟ್ಟಣದ ಕಲ್ಮಠದ ಆವರಣದಲ್ಲಿ ಹಿಂದೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ ಪಂಡಿತ ಬಾಬುರಾವ್ ಇನಾಮದಾರ ಎಂಬುವವರು ಸಂಜೆ ಸಮಯದಲ್ಲಿ ಸಂಗೀತ ಹೇಳಿಕೊಡುತ್ತಿದ್ದರು. ತಮ್ಮ ಸಂಗೀತ ಕಛೇರಿಯ ವಿರಾಮದ ಅವಧಿಯಲ್ಲಿ ತಿನ್ನಲು ಶೇಂಗಾ, ಖಾರಾ, ಬಜಿ ಕಟ್ಟಿಸಿಕೊಂಡು ಬಾ ಅಂತ ಅವರು ತಮ್ಮ ಶಿಷ್ಯಂದಿರಿಗೆ ಹೇಳಿ ಕಳುಹಿಸುತ್ತಿದ್ದರಂತೆ. ಶಿಷ್ಯಂದಿರು ಹೋಟೇಲಿನಲ್ಲಿ ಇದೆಲ್ಲವನ್ನು ಪ್ಯಾಕ್ ಮಾಡಿಸಿಕೊಂಡು ಸಂಗೀತ ಕಛೇರಿಗೆ ಹೋಗುತ್ತಿದ್ದರು. ದಿನಗಳೆದಂತೆ ಇಷ್ಟೊಂದು ಉದ್ದದ ಲಿಸ್ಟ್ ಹೇಳದೇ 'ಸಂಗೀತ ಕಛೇರಿಗೆ ಪಾರ್ಸಲ್ ಕೊಡ್ರಿ', 'ಸಂಗೀತ ಕೊಡ್ರಿ' ಎಂದು ಹೇಳತೊಡಗಿದ್ರು. ದಿನಗಳೆದಂತೆ ಜನರೂಢಿಯಲ್ಲಿ ಈ ಖಾದ್ಯ 'ಸಂಗೀತ' ಎಂದೇ ಹೆಸರಾಗಿದೆ.

ಕಿತ್ತೂರ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ಅವರ ಶೌರ್ಯದಿಂದ ಕಿತ್ತೂರು ಗಂಡು ಮೆಟ್ಟಿದ ನೆಲವೆಂದು ಪ್ರಸಿದ್ಧಿಯಾಗಿದ್ದು, ಇವರ ಶೌರ್ಯ, ಸಾಹಸದಷ್ಟೇ 4 ದಶಕಗಳ ಹಿಂದೆ ಜನ್ಮ ತಾಳಿದ ಕಿತ್ತೂರಿನ 'ಸಂಗೀತ ಖಾದ್ಯ'ದ ಘಮ ಸುತ್ತಮುತ್ತಲಿನ ಜಿಲ್ಲೆಗಳಿಗೆ ಹರಡಿದೆ. ಇಂದಿಗೂ ಕಲ್ಮಠದ ಪರಂಪರೆಯಾಗಿರುವ 'ಕೇಳುವ ಸಂಗೀತ' ಹಾಗೂ ಹೋಟೇಲುಗಳಲ್ಲಿನ 'ತಿನ್ನುವ ಸಂಗೀತ' ಯಥೇಚ್ಛವಾಗಿ ಮುಂದುವರೆದಿವೆ. ಈ ಮೂಲಕ ಕಿತ್ತೂರಿನ ಪರಂಪರೆಯ ಹಿರಿಮೆ, ಗರಿಮೆಗೆ ಮತ್ತೊಂದು ಗರಿ ಮೂಡಿದ್ದು ನಮ್ಮ ಹೆಮ್ಮೆ ಅಲ್ಲವೇ? ■

## ಸವಿ ಕರ್ನಾಟಕ

ಕರ್ನಾಟಕದ ವಿವಿಧ ಭಾಗಗಳಿಂದ ವಿಶೇಷ ರುಚಿಗಳನ್ನು ಪರಿಚಯಿಸುವ ಅಂಕಣ 'ಸವಿ ಕರ್ನಾಟಕ'. ಆ ಸವಿಯ ಹಿಂದಿನ ಪರಂಪರೆ, ಪರಿಚಯ ಮತ್ತು ವಿಧಾನಗಳ ಮಾಹಿತಿಗುಚ್ಛ.

